CC 116/2025
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 16.12.2025

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಟಿ ಎಸ್ ಸಿ ವಕೀಲರಿಂದಃ**

ಆರೋಪಿಯು ನನ್ನ ಗಂಡನ ಸ್ನೇಹಿತ ಇದ್ದು ನನಗೆ 7-8 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ ಜೊತೆಗೆ ಬಟ್ಟೆ ವ್ಯಾಪಾರ ಮಾಡುತ್ತೇನೆ. ನಾನು ಬಟ್ಟೆ ವ್ಯಾಪಾರವನ್ನು ಮಾಡಲು ಪರವಾನಗಿ ಪಡೆದಿಲ್ಲ. ಸಾಕ್ಷಿ ಮುಂದುವರೆದು ಬಟ್ಟೆಗಳ ವ್ಯಾಪಾರ ಮಾಡಲು ಹಳ್ಳಿಗಳಿಗೆ ಹೋಗುತ್ತೇನೆ ಎಂದು ನುಡಿಯುತ್ತಾರೆ. ನಾನು ಬಟ್ಟೆಗಳ ವ್ಯಾಪಾರ ಮಾಡಲು ಹಳ್ಳಿಗಳಿಗೆ ಹೋಗುತ್ತೇನೆ ಎಂದು ನನ್ನ ನೋಟೀಸು ಮತ್ತು ದೂರಿನಲ್ಲಿ ಹೇಳಿಲ್ಲ. ಪ್ರಶ್ನಿತ ಚೆಕ್ಕನ್ನು ಆರೋಪಿಯೇ ಭರ್ತಿ ಮಾಡಿಕೊಟ್ಟಿರುತ್ತಾರೆ. ನಿಪಿ.2 ನ್ನು ಸಹ ಆರೋಪಿಯೇ ಭರ್ತಿ ಮಾಡಿರುತ್ತಾರೆ. ನಾನು ಚಲನ್‌ಗೆ ಸಹಿ ಹಾಕಿಲ್ಲ. ನಾನು ಚೆಕ್ಕನ್ನು ಬ್ಯಾಂಕಿಗೆ ನಗದೀಕರಣಕ್ಕೆ ಹಾಕುವಾಗ ಬ್ಯಾಂಕಿಗೆ ಹೋಗಿದ್ದೆ. ಚೆಕ್ಕನ್ನು ಬ್ಯಾಂಕಿಗೆ ಹಾಕಿದ 2 ದಿನಗಳ ನಂತರ ಸಾಕಷ್ಟು ಹಣ ಇಲ್ಲ ಎಂದು ವಾಪಸ್ಸಾಗಿರುತ್ತದೆ. ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿಗೂ ಮತ್ತು ಉಳಿದ ಬರವಣಿಗೆಗೂ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಅವರೆ ಬರೆದುಕೊಟ್ಟಿದ್ದರು ಎಂದು ನುಡಿಯುತ್ತಾರೆ. ನನ್ನ ಗಂಡ ವ್ಯವಸಾಯ ಮಾಡುತ್ತಾರೆ. ನನ್ನ ಗಂಡ ಓದಿಲ್ಲ. ನಾನು ಚೆಕ್ಕನ್ನು ಬ್ಯಾಂಕಿಗೆ ಹಾಕುವಾಗ ಬ್ಯಾಂಕಿನವರು ನನಗೆ ಪಾನ್ ಕಾರ್ಡ್ ಕೇಳಿಲ್ಲ. ಅಷ್ಟು ದೊಡ್ಡ ಮೊತ್ತದ ವ್ಯವಹಾರ ಮಾಡುವಾಗ ಪ್ಯಾನ್ ಕಾರ್ಡ್ ಬೇಕು ಎಂದರೆ ಸಾಕ್ಷಿಯು ಪ್ಯಾನ್ ಕಾರ್ಡ್ ಇರುತ್ತದೆ ಆದರೆ ಬ್ಯಾಂಕಿನವರು ನನಗೆ ಕೇಳಿಲ್ಲ ಎಂದು ನುಡಿಯುತ್ತಾರೆ. ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟನ್ನು ನ್ಯಾಯಾಲಯಕ್ಕೆ ಹಾಜರಿಸಿಲ್ಲ. ನಮ್ಮ ಮನೆಯವರನ್ನು ಕೇಳಿ ಸ್ಟೇಟ್ ಮೆಂಟ್ ಹಾಜರುಪಡಿಸುತ್ತೇನೆ. ನನ್ನ ದೂರಿನಲ್ಲಿ ರೂ. 6,50,000/- ಹೇಗೆ ಬಂದಿತು ಎಂದು ಹೇಳಿರುತ್ತೇನೆ. ನನಗೆ ತೋಟ ಇದ್ದು ಅಡಿಕೆ ಮಾರಿ ಬಂದ ರೂ. 5,50,000/- ಹಣ ಹಾಗೂ 1 ಲಕ್ಷ ನನ್ನ ಉಳಿತಾಯದ ಹಣ ಇತ್ತು. ಮನೆಯ ಹತ್ತಿರ ಅಡಿಕೆ ತೆಗೆದುಕೊಂಡು ಹೋಗಲು ಬಂದಿರುವವರಿಗೆ ಅಡಿಕೆ ಮಾರಿದ್ದೆವು ಅವರ ಹೆಸರು ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯಕ್ಕೆ ಅಡಿಕೆ ತೋಟ ಇರುವ ಜಮೀನಿನ ಪಹಣಿ ಕೊಟ್ಟಿಲ್ಲ. ನನ್ನ ಅತ್ತೆಗೆ ಇಬ್ಬರು ಮಕ್ಕಳು. ನನ್ನ ಅತ್ತೆ ಮನೆಯಲ್ಲಿ ಇರುತ್ತಾರೆ. ನನ್ನ ಅತ್ತೆಯ ಹೆಸರಿನಲ್ಲಿರುವ ಪಹಣಿ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅಡಿಕೆಯನ್ನು ತೆಗೆದುಕೊಂಡವರು 500 ಮುಖಬೆಲೆಯ ನೋಟುಗಳಲ್ಲಿ ಹಣ ಕೊಟ್ಟಿದ್ದರು. 4 ಎಕರೆ ಅಡಿಕೆ ತೋಟ ಇರುತ್ತದೆ. ನನ್ನ ಅತ್ತೆಗೆ ಇಬ್ಬರು ಗಂಡು ಮಕ್ಕಳು. ಇಬ್ಬರು ಗಂಡು ಮಕ್ಕಳ ನಡುವೆ ಪಾಲು ವಿಭಾಗ ಆಗಿಲ್ಲ. ಮನೆಯ ಹತ್ತಿರ ಬಂದವರಿಗೆ ಅಡಿಕೆ ಮಾರಾಟ ಮಾಡಿದ್ದೆ ಎಂದು ದೂರಿನಲ್ಲಿ ಬರೆಸಿಲ್ಲ. ಈಗ ನಾನು ಮನೆಯ ಹತ್ತಿರ ಬಂದವರಿಗೆ ಅಡಿಕೆ ಮಾರಾಟ ಮಾಡಿದ್ದೆ ಎಂದು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಣವನ್ನು ಕೊಡುವಾಗ ಆರೋಪಿ ಮತ್ತು ಅವರ ಹೆಂಡತಿ ಬಂದಿದ್ದರು. ಆರೋಪಿಗೆ 500 ಮುಖಬೆಲೆಯ 13 ಕಟ್ಟುಗಳನ್ನು ಕೊಟ್ಟಿದ್ದೆ. 2 ಲಕ್ಷ ಮೇಲ್ಪಟ್ಟು ನಗದು ವ್ಯಾಪಾರ ಮಾಡುವುದು ಕಾನೂನುಬಾಹಿರ ಎಂದರೆ ಸರಿ. ಅಡಿಕೆ ಮಾರಿ ಹಣ ಇದ್ದುದ್ದರಿಂದ ಆರೋಪಿಗೆ ನಗದು ರೂಪದಲ್ಲಿ ಹಣ ಕೊಟ್ಟಿದ್ದೆ. ಆರೋಪಿಗೆ ಹಣ ಕೊಡುವಾಗ ನನ್ನ ಗಂಡ ಮತ್ತು ಮಗ

ಇದ್ದರು. ಸದರಿ ವಿಷಯವನ್ನು ನನ್ನ ದೂರಿನಲ್ಲಿ ಹೇಳಿ ಬರೆಸಿಲ್ಲ. ನಾನು ಆರೋಪಿಗೆ ರೂ. 6,50,000/- ಹಣ ಕೊಡದೇ ಇರುವುದರಿಂದಲೇ ನಾನು ನನ್ನ ದೂರಿನಲ್ಲಿ ಸದರಿ ವಿಷಯ ಬರೆಸಿಲ್ಲ ಎಂದರೆ ಸರಿಯಲ್ಲ.

ಆರೋಪಿಯು ನನ್ನ ಬಳಿಗೆ ಬಂದು 7 ಲಕ್ಷ ಸಾಲ ಕೊಡುವಂತೆ ಕೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿಗೆ ಬಿಟ್ಟು ಬೇರೆ ಯಾರಿಗೂ ಸಾಲ ಕೊಟ್ಟಿಲ್ಲ. ಸಾಲ ಕೊಡುವ ಬಗ್ಗೆ ನಾನು ಪರವಾನಗಿ ಪಡೆದಿಲ್ಲ. ನನ್ನ ಗಂಡ ವ್ಯವಸಾಯ ಬಿಟ್ಟು ಕೂದಲು ವ್ಯಾಪಾರ ಮಾಡುತ್ತಾರೆ. ಆರೋಪಿ ಮತ್ತು ನಮ್ಮ ಊರು ಬೇರೆ ಬೇರೆ ಎಂದರೆ ಸರಿ. ಈ ಪ್ರಕರಣದ ವ್ಯವಹಾರವು ನನ್ನ ಗಂಡ ಮತ್ತು ಮಗನ ಸಮಕ್ಷಮ ನಡೆದಿರುತ್ತದೆ. ದಿನಾಂಕ 23.06.2025 ರಂದು ಆರೋಪಿಯು ಬೆಂಗಳೂರಿನಲ್ಲಿ ಇದ್ದರು ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಕೂಡಿಕೊಂಡು ಬ್ಯಾಂಕಿಗೆ ಹೋಗಿದ್ದೆವು. ಆರೋಪಿಯು ಕೊಟ್ಟ ಚೆಕ್ಕನ್ನು ಬ್ಯಾಂಕಿಗೆ ಹಾಕಿರುತ್ತೇವೆ. ಆ ದಿನ ಆರೋಪಿಯು ಎಲ್ಲಿ ಇದ್ದರು ಎಂದು ನನಗೆ ಮಾಹಿತಿ ಇಲ್ಲ. ಆರೋಪಿಗೂ ಮತ್ತು ನನ್ನ ಗಂಡನಿಗೂ ಪರಿಚಯ ಇರುತ್ತದೆ. ಆರೋಪಿಗೆ ನಾನು ರೂ. 6,50,000/- ಹಣ ಕೊಟ್ಟಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ಅಷ್ಟು ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಎಷ್ಟು ಮೊತ್ತದ ಅಡಿಕೆಯನ್ನು ಮಾರಾಟ ಮಾಡಿರುತ್ತೇನೆ ಎಂದು ನನ್ನ ಬಳಿ ದಾಖಲೆ ಇಲ್ಲ. ಆ ರೀತಿ ವ್ಯವಹಾರ ನಡೆಯದೇ ಇರುವುದರಿಂದಲೇ ನನ್ನ ಬಳಿ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಆ ರೀತಿ ಅಡಿಕೆ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ 1 ಲಕ್ಷ ಉಳಿತಾಯದ ಹಣ ಇತ್ತು ಎಂದು ದೂರು ಮತ್ತು ನೋಟಿಸಿನಲ್ಲಿ ಬರೆಸಿಲ್ಲ. ಆರೋಪಿಗೆ ರೂ.6,50,000/- ಹಣ ಕೊಡುವಾಗ ಭದ್ರತೆಗೆ ಏನಾದರೂ ಪಡೆದಿದ್ದೀರಾ ಎಂದರೆ ಸಾಕ್ಷಿಯು ಚೆಕ್ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ಚೆಕ್ಕನ್ನು ಕೊಡುವಾಗ ಆರೋಪಿಯೇ ಭರ್ತಿ ಮಾಡಿ ಕೊಟ್ಟಿದ್ದರು. ಆರೋಪಿಯು ಶೇಕಡ 2 ರಂತೆ ಬಡ್ಡಿಯನ್ನು ಕೊಡುತ್ತೇನೆ ಎಂದು ಹೇಳಿದ್ದು ಆದರೆ ಅವರು ಬಡ್ಡಿ ಹಣವನ್ನು ಕೊಟ್ಟಿಲ್ಲ. ಆರೋಪಿ ಮತ್ತು ನನ್ನ ನಡುವೆ ಆ ರೀತಿ ಮಾತುಕತೆ ಆಗದೇ ಇರುವುದರಿಂದಲೇ ಅವರು ಬಡ್ಡಿ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಚೆಕ್ಕನ್ನು ನಗದೀಕರಣ ಹಾಕುವ ಪೂರ್ವದಲ್ಲಿ ಫೋನ್ ಮಾಡಿದಾಗ ಅವರಿಗೆ ಬಡ್ಡಿ ಹಣವನ್ನು ಕೇಳಿಲ್ಲ. ನಾನು ಆರೋಪಿಗೆ ಹಣ ಕೊಡದೇ ಇರುವುದರಿಂದ ನಾನು ಅವರ ಜೊತೆ ಫೋನ್ ನಲ್ಲಿ ಮಾತನಾಡಿಲ್ಲ ಮತ್ತು ಬಡ್ಡಿ ಹಣ ಕೇಳಿಲ್ಲ ಎಂದರೆ ಸರಿಯಲ್ಲ. ನಿಪಿ.6 ಮತ್ತು 7 ರಲ್ಲಿ ಆರೋಪಿಯೇ ಬರೆದು ಸಹಿ ಮಾಡಿರುತ್ತಾರೆ. ನಿಪಿ.6 ಮತ್ತು 7 ರಲ್ಲಿ ಪೋಸ್ಟ್ ಮೆನ್ ಬರೆದಿರುತ್ತಾರೆ. ಆರೋಪಿಯು ಮನೆಯಲ್ಲಿ ಬಹಳ ಇರದೇ ಊರ ಮೇಲೆ ವ್ಯಾಪಾರಕ್ಕೆ ಹೋಗುತ್ತಾರೆ ಎಂದರೆ ಸರಿ. ನಮ್ಮ ವಕೀಲರ ಮೂಲಕ ಕಳುಹಿಸಿದ ನೋಟೀಸು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ಚೆಕ್ಕಿನಲ್ಲಿರುವ ಸಹಿಯನ್ನು ನಾನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರಶ್ನಿತ ಚೆಕ್ಕನ್ನು ಆರೋಪಿಯು ನನಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿಯು ಬೇರೆ ಕಡೆ ಚೀಟಿ ವ್ಯವಹಾರ ಮಾಡುತ್ತಿದ್ದು ಅದರ ಭದ್ರತೆಗಾಗಿ ಅದನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ಆರೋಪಿಯು ಪ್ರಶ್ನಿತ ಚೆಕ್ಕನ್ನು ಚೀಟಿ ವ್ಯವಹಾರದ ಭದ್ರತೆಗಾಗಿ ನಮ್ಮ ಊರಿನ ಹುಚ್ಚಪ್ಪ ಮತ್ತು ಕಾಂತಪ್ಪ ಎನ್ನುವವರಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಅವರು ಯಾರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹುಚ್ಚಪ್ಪ ಮತ್ತು ಕಾಂತಪ್ಪ ನನ್ನ ಗಂಡನ ಸ್ನೇಹಿತರು ಎಂದರೆ ಸರಿಯಲ್ಲ. ಅವರು ನನ್ನ ಗಂಡನ ಸ್ನೇಹಿತರು ಎಂದು ಗೊತ್ತಿದ್ದರು ಸಹ ನಾನು ಅವರು ಯಾರು ಎಂದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಪ್ರಶ್ನಿತ ಚೆಕ್ಕನ್ನು ಅವರ ಕಡೆಯಿಂದ ತೆಗೆದುಕೊಂಡು ಬಂದು ನನಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನಗೂ ಮತ್ತು ಆರೋಪಿಗೂ ಹಾಗೂ ನನ್ನ ಗಂಡನಿಗೂ ಯಾವುದೇ ಪರಿಚಯ ಇಲ್ಲ ಎಂದರೆ ಸರಿಯಲ್ಲ. ಆರೋಪಿಯ

ಫೋನ್ ನಂಬರ್ ನನ್ನ ಮಗನಿಗೆ ಗೊತ್ತಿರುತ್ತದೆ. ನನಗೆ ಆರೋಪಿಯ ಪರಿಚಯ ಇಲ್ಲದ ಕಾರಣ ನನಗೆ ಫೋನ್ ನಂಬರ್ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಬೇರೆಯವರ ಕಡೆಯಿಂದ ಚೆಕ್ಕನ್ನು ಪಡೆದುಕೊಂಡು ಬಂದು ಬ್ಯಾಂಕಿಗೆ ಹಾಜರಿಸಿ ವಂಚಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಅಕ್ರಮ ಹಣ ಗಳಿಸುವ ಉದ್ದೇಶದಿಂದ ಬ್ಯಾಂಕಿಗೆ ಹಾಜರಿಸಿದ್ದೆ ಎಂದರೆ ಸರಿಯಲ್ಲ. ನನ್ನ ದೂರಿನಲ್ಲಿ ಹೇಳಿರುವ ಎಲ್ಲಾ ಅಂಶಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಆರೋಪಿಗೆ ನೋಟೀಸ್ ಜಾರಿಯಾಗದ ಕಾರಣ ಅವರು ನನ್ನ ನೋಟಿಸಿಗೆ ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಹಣವನ್ನು ಸಾಲವಾಗಿ ಕೊಡುವಷ್ಟು ಸಾಮರ್ಥ್ಯ ಹೊಂದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ವ್ಯಾಪಾರ ಮಾಡುವುದಿಲ್ಲ ಮತ್ತು ಆ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಹೇಳಿದ ಪ್ರಕಾರ ನಾನು ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

CC 116/2025
PW-1

**<u>ಮರು ವಿಚಾರಣೆಃ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**